RegdNo B G155 Sm 15—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಆರಮನೆಸರಸ್ಕೇದಾರ್ ಎಂ ವಿ ಶುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ'ಎಸ್ ಕೃಷ್ಣರಾವ್ 2

ಕಾಮರಾಜರೇ ಮತ್ತೆ ಕ್ಯಾಂಗ್ರೆಸ್ ಅಧ್ಯಕ್ಷರೆ ?

ನವದೆಹಲಿ — ಬೆಂಗಳೂರಿನಲ್ಲಿ ನಡೆಯುವ ಏ ಐ ಸಿ ಸಿ ಗೆ ಕಾಮರಾಜರೇ ವತ್ತೆ, ಕಾಂಗ್ರೆಸ್ಸ ಅಧ್ಯಕ್ಷರಾಗಿಂಬೇಕೆಂಬ ಶರಾವುಗಳು ಒಂದುಬೀಳುತ್ತಿದೆ

★

ಹುಚ್ಚು ಮಾತು

ತಿರುವೇಂಡ್ರಂ — ಚೀನವನ್ನು ಮಿಲಿಟರಿಯಲ್ಲಿ ಸೋಲಿಸುವುದು ಭಾರತಕ್ಕೆ ಸಾಧ್ಯವಿಲ್ಲವೆಂದು ತಾವು ಕಮ್ಯೂನಿಸ್ಟರು ಅಭಿಪ್ರಾಯಪಟ್ಟಿದಾರೆ

❁

ರಾಜೀನಾಮೆ

ತಿರುವೇಂಡ್ರಂ — ಇ ಎಂ ಎಸ್ ನಂಬೂದರಿಪಾದರು ತಾವು ಕಮ್ಯೂನಿಸ್ಟು ಪಕ್ಷದ ಕೇಂಳ ಶಾಖೆಯು ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಇತ್ತಿದಾರೆ

❁

ವೇಯುರರ ಎಚ್ಚರಿಕೆ

ಬೆಂಗಳೂರು — ಕಾರ್ಪೊರೇಷನ್ ವಿದ್ಯಾಭ್ಯಾಸಾಧಿಕಾರಿಗಳು ಕಾರ್ಪೊರೇಷನ್ನು ಹೈಸ್ಕೂಲುಗಳಲ್ಲಿ ಹೆಚ್ಚು ಶೇಕಡ ಪ್ರಮಾಣಗಳಾಗದಿದ್ದರೆ ಸ್ಕೂಲುಗಳನ್ನೇ ಮುಚ್ಚಬೇಕಾದೀತೆಂದು ವೇಯುರರು ಹೇಳಿದರು.

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಪ್ಪಾಸಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿಸರಿಂದ

16 ಶಕ್ರವಾರ ಶದಿಗೆ ಧನಿಷ್ಠ
ದಕ್ಷಿಣಾಯನ ಪುಣ್ಯಕಕಾಲ

ಕಾರ್ಡುಗಳ ಕಥೆ

ಬೆಂಗಳೂರು ವಾರ್ತೆಯಿದು — ಬೆಂಗಳೂರಿನ ಲಾಯರೊಬ್ಬರಿಗೆ ಪೊನ್ನೆ ಒಂದು ಕಾರ್ಡು ಬಂದಿತೆಂದೂ, ಆ ಕಾರ್ಡು 1958 ನೇ ಇಸವಿ ಆಗಸ್ಟು 12 ರಂದು ಹಾಕಿದ್ದಿಂದೂ, ಕಡಮೆ ಸ್ಟ್ಯಾಂಪು ಇದ್ದದರಿಂದ 2 ಪೈಸೆ ವಸೂಲ್ಮಾಡಲಾಯಿತೆಂದೂ ಪರಿಯಾಗಿದೆ — ಮತ್ತು ಅದೇ ಲಾಯರಿಗೆ ಅಂದೇ ಬಂದ ಮತ್ತೊಂದು ಕಾರ್ಡು ಹುದರಾಸಿನಲ್ಲಿ 1959 ನೇ ಇಸವಿ ನವೆಂಬರು 20 ರಂದು ಪೋಸ್ಟುಮಾಡಿದ್ದೆಂದೂ, ಅದಕ್ಕೂ ಸ್ಟ್ಯಾಂಪು ಕಡಮೆ ಇದ್ದುದರಿಂದ 2 ಪೈಸೆ ವಸೂಲು ಮಾಡಲಾಯಿತೆಂದೂ ವರದಿಯಾಗಿದೆ.

★

ವಿದ್ಯಾಭ್ಯಾಸದಲ್ಲಿ

ಬೆಂಗಳೂರು — ವಿದ್ಯಾಭಾಸದಲ್ಲಿ ಪ್ರಾಯೋಗಿಕಗಳನ್ನು 25 ವರ್ಷಗಳಾದ ನಿಲ್ಲಿಸಬೇಕೆಂದು ಎಂ ಎಲ್ ಸಿ ಗಳಾದ ಶ್ರೀ ಎಂ ಪಿ ಎಲ್ ಶಾಸ್ತ್ರಿ ಹೇಳಿದರು

❁

ಕನಸು

ರಷಿಯಾವು ಟಬೆಟ್ಟಿನಿಂದ ಹರಿದು ಬರುವ ಬ್ರಹ್ಮಪುತ್ರ, ಸಾಲ್ವಿನ್ ಮೇಕಾನ್ ಮುಂತಾದ ಭಾರೀ ನದಿಗಳ ನೀರನ್ನು ಮಂಗೋಲಿಯಾದ ಗೋಬಿ ಮರುಭೂಮಿಗೆ ತಿರುಗಿಸಿ ಅದನ್ನು ಫಲವತ್ತಾದ ಭೂಮಿ ಮಾಡುವ ಕನಸು ಕಾಣುತ್ತಿದೆ

★

ಅನ್ನ ಸತ್ಯಾಗ್ರಹ

ಹೊಸಪೇಟೆ — ಇಂಡಿಯನ್ ನಗರ ರಿಫೈನರಿ ನೌಕರರ ಸಂಘದ ಕಾರ್ಯದರ್ಶಿ ಶ್ರೀ ಶ್ರೀ ವಾಸುದೇವಪಂತವ್ ಮತ್ತಿತರ 7 ಮಂದಿಯನ್ನು ಕಾರ್ಖಾನೆ ಆಡಳಿತಗಾರರು ವಜಾ ಮಾಡಿರುವುದನ್ನು ಪ್ರತಿಭಟಿಸಿ ಕಾರ್ಖಾನೆ ಗೇಟಿನ ಮುಂದೆ ಶನಿ 10 ರಿಂದ ಉಪವಾಸ ಮಾಡುತ್ತಿರುವರು

ಪ್ರವಾಹ ಹಾವಳಿ

ಪಾಟ್ನಾ — ಬಿಹಾರಿನ ನದಿಗಳಲ್ಲಿ ಪ್ರವಾಹದಿಂದ ಅಸ್ತವ್ಯಸ್ತ, ಮತ್ತು ಬೆಳೆಗೆ ತುಂಬಾ ನಷ್ಟವಾಗಿ ಎಂಡು ಲಕ್ಷ ಜನರು ಕಷ್ಟಕ್ಕೀಡಾಗಿದ್ದಾರೆ.

★

ಕಳ್ಳ ಸಾಗಾಣಿಕೆ

ಬೆಂಗಳೂರು — ಬೆಂಗಳೂರು ಮತ್ತು ಉಳ್ಳಾಲ ಸ್ಟೇಷನ್ನುಗಳಿಂದ ಬಂದ ಕಳ್ಳ ಸಾಗಾಣಿಕೆ ಅಕ್ಕಿ ಮತ್ತು ಸಕ್ಕರೆ ಯನ್ನು ಪೋಲಿಸರು ವಶಪಡಿಸಿಕೊಂಡರು

❁

ಶರಣಾಗತಿ

ಸ್ಥಾನಬದ್ಧರಾಗಿರುವ ಕ್ವಿಲೋನಿನ ವಾಮ ಕಮ್ಯೂನಿಸ್ಟರು ಕಾಳಪ್ಪ ಮತ್ತು ದಿವಾಕರಣ್ ಕ್ಷಮಾಪಣೆ ಅರ್ಪಿಸಿದರು

❁

ಮಳೆ ಹಾವಳಿ

ಹೈದರಾಬಾದು — ಮಳೆ ವಿಪರೀತವಾಗಿದ್ದು ಕೆಳಮಟ್ಟದ ಸ್ಥಳಗಳಲ್ಲೆಲ್ಲಾ ನೀರು ನಿಂತಿದ್ದು, ಒಂದು ಗೋಡೆ ಕುಸಿದು ಇಬ್ಬರು ಗಾಯಗೊಂಡರು

★

ಸೊಳ್ಳೆ ಕಾಟ ತಪ್ಪಿಸಲು

ತಿರುವೇಂಡ್ರಂ — ಸೊಳ್ಳೆ ಹಾವಳಿ ತಪ್ಪಿಸುವ ಕಾರ್ಯಕ್ರಮಕ್ಕಾಗಿ ರಾಜ್ಯದ ಯಾವ ಸ್ಥಳೀಯ ಸಂಸ್ಥೆಗೂ ರೂ 75 ಸಾವಿರದವರೆಗೂ ಗ್ರಾಂಟು ಕೊಡಲು ಸರ್ಕಾರ ನಿರ್ಧರಿಸಿದೆ

★

! ಗೋವಾ ! ಮಹಾರಾಷ್ಟ್ರಕ್ಕೇ !

ನವದೆಹಲಿ ಮೊರ್ತಿಯಂತೆ ಮಹಾರಾಷ್ಟ್ರದಲ್ಲಿ ಗೋವಾ ವಿಲೀನವಾಗಬೇಕೆ ಅಥವಾ ಹತ್ತು ವರ್ಷಗಳ ನಂತರ ಆಗಬೇಕೇ ಎಂಬುಡನ್ನು ಅರಿಯಲು ಈ ವರ್ಷ ಕೊಂಕಣಿಯಲ್ಲಿ ನಡೆಯುವ ಒಗ್ಗೆನಿನ್ನೆ ತಾವು ಪ್ರಧಾನಿಗಳೊಡನೆ ಮಾತನಾಡಿದಾಗ ಪ್ರಧಾನಿಗಳು ತಿಳಿಸಿದರೆಂದು ಗೋವಾ ಮುಖ್ಯ ಮಂತ್ರಿ ಭಾಂಡೋಡ್ಕರರು ಹೇಳಿದರು ; ಆಗ ಭಾರತ ರಕ್ಷಣಾ ಮಂತ್ರಿ, ಶ್ರೀಯುತರು ಇದ್ದರೆಂದೂ ಹೇಳಲಾಗಿದೆ

ಈ ವಿಷಯದಲ್ಲಿ ಮೈಸೂರಿನ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಪ್ರತಿಭಟಿಸಿ ಈ ತೀರ್ಮಾನ ನ್ಯಾಯವಲ್ಲವೆಂದು ನೆಹರೂರ ಭಂಡಸೆಗೆ ವಿರುದ್ಧವೆಂದೂ, ಏಕ ಪಕ್ಷೀಯವೆಂದೂ ಹೇಳಿದರು ; ಕೇಂದ್ರದ ಮೇಲೆ ಮಹಾರಾಷ್ಟ್ರದ ಪ್ರಭಾವ ಹೆಚ್ಚಾಗಿದೆಯೆಂದೂ, ಮೈಸೂರು ರಾಜ್ಯ ಏದೆಯೆಂಬುದನ್ನೂ ಕೇಂದ್ರ ಮರತಂತಿದೆಯೆಂದೂ ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯ ಸರಕಾರವೂ ಪ್ರತಿಭಟಿಸಿ ಈ ನಿರ್ಧಾರವನ್ನು ಪುನರ್ಪರಿಶೀಲಿಸಲು ಒತ್ತಾಯ ಮಾಡಲಿರುವುದು ಸ್ವಾಭಾವ್ಯ.

❁

ಆರೋಗ್ಯ ಸಪ್ತಾಹ

ಮೈಸೂರು — ನಗರವನ್ನು ನಿರ್ಮಲವಾಗಿಡಲು ಈಗ ನಡೆಸುತ್ತಿರುವ ಪ್ರಯತ್ನಗಳಲ್ಲಾ ದಿನಾಚರಣೆ ಜೊತೆಗೆ ಆರೋಗ್ಯ ಸಪ್ತಾಹವನ್ನು ಪ್ರಾರಂಭಿಸಲಿದೆ : ಪ್ರಥಮ ಆರೋಗ್ಯ ಸಪ್ತಾಹವನ್ನು ಶ್ರಾ 17 ಬೆಳಿಗ್ಗೆ 7 ಗಂಟೆಗೆ ಪ್ರಾರಂಭಾಧ್ಯಕ್ಷರು ಉದ್ಘಾಟಿಸುವರು.

★

ಆಹಾರ ಸಮಸ್ಯೆ

(ಲೇಖಕರು — ಶ್ರೀ ಅನಂತನಾರಸಿಂಹಮೂರ್ತಿಗಳಾರ್, ಹೊಳಗನೂರು)

(ಮುಂದುವರಿದುದು)

ಜನಸಂಖ್ಯೆ ಹೆಚ್ಚಿರುವ ವಿಚಾರ ಸರ್ಕಾರಕ್ಕೆ ತಿಳಿಯಬೇಕಾದರೆ ಅದು ಪ್ರತಿ ವರ್ಷಕ್ಕೊಮ್ಮೆ ನಡೆಯುವ ಜನಗಣತಿಯಿಂದ! ಜನಗಣತಿ ಮಾಡಲು ಸಾಮಾನ್ಯವಾಗಿ ಗಣ್ಯಾಧಿಕಾರಿಗಳು ಪ್ರತಿ ಮನೆಗೂ ಹೋಗಿ ಅಂಕಿಸಂಖ್ಯೆಗಳನ್ನು ತಿಳಿದು ಗುರುತು ಹಾಕುವುದು ಬಹಳ ಅವಶ್ಯಕ : ಶಾಲೆಯ ಉಪಾಧ್ಯಾಯರುಗಳು ಮನೆಮನೆಗೂ ಹೋದರೂ ಕೂಡ ಸರಿಯಾದ ಅಂಕಿಸಂಖ್ಯೆಯನ್ನು ಪಡೆಯುವುದು ಬಹಳ ಶ್ರಮ : ಈಗ್ಗೆ 5 ವರ್ಷಗಳ ಹಿಂದೆ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಎರಡು ಮನೆಗಳಲ್ಲಿದ್ದುದನ್ನು ಗಮನಿಸಿ ಅಧಿಕಾರಿಗಳ ಗಮನಕ್ಕೆ ತಂದೆನು ; ಅದೇ ಪಟ್ಟಿಯಲ್ಲಿ ಒಂದು ಮನೆಯಲ್ಲಿ ತಾಯಿಗೆ 18 ವರ್ಷ ಮಗನಿಗೆ 35 ವರ್ಷ ಹಾಕಿತ್ತು ; 1961 ನೇ ವರ್ಷದ ಜನಗಣತಿ ಕಾಲದಲ್ಲಿ ಅನೇಕರನ್ನು ಕೇಳಿಯೇ ಇಲ್ಲವೆಂದು ನಮ್ಮ ಗಮನಕ್ಕೆ ಬಂದಿತು : ಈಗಲೂ ಕೂಡ ಅಂಕಿಸಂಖ್ಯೆ ಇಲ್ಲದಿಯೂ ಲೆಕ್ಕವನ್ನೂ, ಮತದಾರರ ಪಟ್ಟಿಯನ್ನೂ, ಗ್ರಾಮದ ತ್ಯಾನಂಭೋಗವು ಬರೆಯುವ ಖಾನೇಷುಮಾರಿ ಲೆಕ್ಕವನ್ನೂ ತಾಳೆನೋಡಿದಲ್ಲಿ ಒಂದಕ್ಕೊಂದಕ್ಕೆ ಹೊಂದಾಣಿಕೆ ಬಂದೇ ಇರುವ ಸಂಗತಿ ವ್ಯಕ್ತವಾಗುತ್ತದೆ ಆದುದರಿಂದ ಕೇವಲ ಅಂಕಿಸಂಖ್ಯೆಗಳ ಮೇಲೆ ಯೋಜನೆಯನ್ನು ರೂಪಿಸುವುದು ಅಷ್ಟು ಸರಿಯಾದ ಕ್ರಮವೆನಿಸುವುದಿಲ್ಲ.

ಭಾರತ ದೇಶದಲ್ಲಿ ಜನಸಂಖ್ಯೆಯು ಹೆಚ್ಚಳಕ್ಕೆ ಜನಸಂಖ್ಯೆ ಏರುತ್ತಿರುವುದೊಂದೇ ಕಾರಣವಲ್ಲ : 1947 ನೇ ವರ್ಷದಿಂದಲೂ ಪಾಕಿಸ್ತಾನದಿಂದ ನಿರಾಶ್ರಿತರು ನಮ್ಮ ದೇಶಕ್ಕೆ ಬರುತ್ತಿದ್ದಾರೆ : ನಂತರ ಟಿಬೆಟ್, ಚೀನಾದಿಂದಲೂ ಬಂದರು : ಇನ್ನು ಮುಂದೆ ಸಿಂಹಳ ಜಾಂಜಿಬಾರ್ ಮುಂತಾದ ದೇಶಗಳಿಂದಲೂ ಬರುವವಂದ್ದಾರೆ : ಲಕ್ಷಾಂತರ ಪಾಕಿಸ್ತಾನದ ಗೂಢಚಾರರು ದೇಶದಲ್ಲೆಲ್ಲಾ ಸಂಚರಿಸುತ್ತಾರೆ : ಲಕ್ಷಾಂತರ ಜನ ಪಾಕಿಸ್ತಾನಿ ಮುಸ್ಲಿಮರು ಅಸ್ಸಾಂ ಪ್ರಾಂತ್ಯದಲ್ಲಿ ನೆಲೆಸಿದ್ದಾರೆ. [ಮುಂದುವರಿಯುವುದು]

—o—

ದಕ್ಷಿಣಾಯನ ಪುಣ್ಯಕಾಲ ವಿಶೇಷ ನಾಳೆ ಸತ್ಯವಾದಿ ಕಾರ್ಯಾಲಯಕ್ಕೆ ರಜ.

ವುಡ್‌ಲ್ಯಾಂಡ್ಸ್ ದಿಗ್ವಿಜಯ 9 ನೇ ವಾರ

ಜಾನ್‌ವರ್ Janwar

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ
ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು
ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದೀ ಚಿತ್ರ

ಅಪೆರ— ಜನಪ್ರಿಯ 4 ನೇ ವಾರ

ಮಾಡರ್ನ್ ಥಿಯೇಟರ್ಸ್‌ನವರ 100 ನೇ ಅಮೋಘ ತಮಿಳು ಚಿತ್ರ

ವಲವನಕ್ಕು ವಲವನ್

ನಟವರ್ಗ— ಜೆಮಿನಿ ಗಣೇಶ್, ಸಾವಿತ್ರಿ, ಕಂಗವೇಲು, ಅಶೋಕ್

ಮತ್ತಾಲಕ್ಷ್ಮಿ ಮನೋರಮ [ಪ್ರತಿ ದಿನ 3 ಆಟಗಳು]

Edited, Printed & Published by Dharma prachara niratha
M S Krishna Rao (Proprietor) at the Satyavadi Press
Chamarajapuram, Mysore-1